ಪದಬಂಧ



ಎಡದಿಂದ ಬಲಕ್ಕೆ:

1. ಜೀವನದ ವಿವಿಧ ಉದ್ದೇಶಗಳನ್ನು ಕುರಿತು ಪೆದ್ದರಿಗೆ ಬುದ್ಧಿವಾದ 4
3. ಉಪಕಾರವೇನಿಲ್ಲ ಇದು ಬರೀ ಕೊಳ್ಳುವ, ಮಾರುವ ಉದ್ಯೋಗ 3
4. ಮತ್ತೆ ಅದೇ ಸರ ಧರಿಸಿದ್ದನ್ನು ಕಂಡು ಭಾರೀ ಅಸೂಯೆ 3
6. ತೋಟಗಾರನಾದರೂ ಎಂಥ ಸವಾಲನ್ನೂ ಮೆಟ್ಟಬಲ್ಲ ದೃಢತೆ 4
7. ಪರಂಪರಾನುಗತ ಶಾಸ್ತ್ರಗಳನ್ನು ಆತ ಸಂಪೂರ್ಣ ಬಲ್ಲವ 4
9. ಆತಂಕಕಾರೀ ಸಮಸ್ಯೆ ಹೌದು. ಆದರೆ ಅದು ಆ ದೇಶದ ಒಳಗಿನದು 4
11. ಗುಡಿಸುವ ಕಾರ್ಯವಾದರೂ ಎಂಥ ಸಂಭ್ರಮ ನೋಡಿದಿರಾ? 4
13. ವ್ಯವಧಾನವಿದ್ದಾಗ ಗಮನಿಸಿ ; ಇದೊಂದು ಹೊಸ ಬಗೆ 4
15. ವಿದ್ವಾಂಸರನ್ನು ಕಂಡರೂ ಇಷ್ಟು ನಿರ್ಲಕ್ಷ್ಯವೇ? 4
17. ಬೇಸರವನ್ನೆಲ್ಲ ಮರೆಸು ; ಸಮಾಧಾನಪಡಿಸು 3
18. ಬಡಬಗ್ಗರಿಗೆ ದಾನ ಮಾಡಲು ತಂದ ಅಗಲ ಬಾಯಿಯ ಪಾತ್ರೆ 3
19. ಕೋಟಿ ಕೋಟಿ ಲಪಟಾಯಿಸುವಂತೆ ಮಾಡಲು ಎಂಥ ಮೋಸಗಾರಿಕೆ! 4

ಮೇಲಿಂದ ಕೆಳಕ್ಕೆ:

1. ಇಡೀ ಊರಿಗೇ ಭಯ ಹಬ್ಬಿತ್ತು ಒಂದು ಸರೀಸೃಪ 3
2. ಕ್ಷೇಮವನ್ನು ತಿಳಿದ ಮೇಲಷ್ಟೇ ಆತಂಕ ಪರಿಹಾರ 3
3. ಸುವಾಸನೆಗೆ ಮೂಲವಾಗುವ ವಸ್ತುಗಳ ಕುರಿತು ಅಧ್ಯಯನ 3
5. ಹೊಸ ತರಹ ಹೌದು ; ಆದರೆ ಅಂದವೇ ಇಲ್ಲದ್ದು 3
7. ಪುರಸಭೆಯ ಸದಸ್ಯರ ಕೈಯಲ್ಲಿ 'ಬೆಳ್ಳಿ ನೀರು ' ನೋಡಿದಿರಾ? 4
8. ತತ್ವರಹಿತರ ವಿಧವಿಧ ನಡೆವಳಿಕೆ ಕಂಡು ಗಡಗಡ 4
9. ದೂಳಿನ ಸಂಕಷ್ಟಗಳನ್ನು ನಿವಾರಿಸಬೇಕೆಂದು ಭಾರೀ ಚಳವಳಿ 4
10. ಕಾಡಿಗೆಂದು ಬಂದವರ ಮೂಗಿಗೆ ಬಡಿಯಿತು ಗಾಢ ಪರಿಮಳ 4
12. ಬೆರಗುಗೊಳಿಸುವಷ್ಟು ಗಹನ, ಆಳ 3
14. ಯಾರಿವಳು ಇಂಥ ಬೆಡಗಿ, ಸೊಗಸುಗಾರ್ತಿ? 3
15. ಊಹಿಸಲಿಕ್ಕೂ ಸಾಧ್ಯವಾಗದಷ್ಟು ಮರಳು 3
16. ನೋಡುತ್ತಲೇ ಆಕರ್ಷಿಸುವಂಥ ಶ್ರೇಷ್ಠ ವರ್ತನೆ 3

## 28-11-2019 ಉತ್ತರಗಳು

ಎಡದಿಂದ ಬಲಕ್ಕೆ:

1. ಉದ್ಧಾರ 3. ಬರಡು 4. ಚತುರ 6. ವಿಷಕರ 7. ಪ್ರಕಟಿಸು 9. ದಳಪತಿ 11. ಅವಸರ 15. ಟಗರು 16. ತಿಲಕ 17. ಳರುಮ (=ಮರುಳ ಹಿಂದು ಮುಂದು)

ಮೇಲಿಂದ ಕೆಳಕ್ಕೆ:

1. ಉಡುಪು 2. ರಚನೆ 3. ಬಳಿಕ 5. ರಜಕ 6. ವಿವಾದ 8. ಸುಸ್ಥಿರ 10. ಪಲ್ಲಟ 12. ವಣಿಕ 13. ದುರುಳ 14. ಅಂತಿಮ

ಪ್ರಶ್ನಾಂಕಣ

# ಮೇಜು ಪರ್ವತ: ಏನು ಅದ್ಭುತ?

ಮೇಜು ಪರ್ವತ (Table Mountain) ಅದು ಭೂ ನೆಲದ ಒಂದು ಅತ್ಯದ್ಭುತ, ಅತ್ಯಾಕರ್ಷಕ ನಿಸರ್ಗ ನಿರ್ಮಿತಿ. ಪರ್ವತ ಎಂದೊಡನೆ ಯಾರ ಮನದಲ್ಲಾದರೂ ಮೂಡುವ ಬಹು ಶಿಖರಗಳ ಸೃಷ್ಟಿ (ಚಿತ್ರ 1) ಯಾವುದನ್ನೂ ಕಿಂಚಿತ್ತೂ ಹೋಲದ ಈ ಬೃಹತ್ ಏಕಶಿಲಾ ಶಿಲ್ಪದ ಶಿರ ಭಾಗ ಚಪ್ಪಟೆಯಾಗಿ, ಸಮತಟ್ಟಾಗಿದೆ (ಚಿತ್ರ 2ರಲ್ಲಿ ಗಮನಿಸಿ). ಹಾಗಾದ್ದರಿಂದಲೇ 'ಮೇಜು ಪರ್ವತ' ಎಂಬ ಹೆಸರನ್ನು ಪಡೆದಿರುವ ಈ ಸೋಜಿಗಮಯ ನಿರ್ಮಿತಿ ಮೂರುಕಿಲೋಮೀಟರ್ ಉದ್ದ ಇದೆ; ಸಾಗರ ಮಟ್ಟದಿಂದ ಒಂದು ಕಿಲೋ ಮೀಟರ್‌ಗಿಂತ ಕೊಂಚ ಅಧಿಕ (1086 ಮೀಟರ್) ಎತ್ತರ ಇದೆ; 200 ಕಿಲೋಮೀಟರ್ ದೂರದಿಂದಲೇ ಕಾಣುವಂತಿದೆ ಕೂಡ.

ಆಫ್ರಿಕಾ ಖಂಡದ, ದಕ್ಷಿಣ ಆಫ್ರಿಕಾ ದೇಶದ ನೈರುತ್ಯದಂಚಿನಲ್ಲಿ, ಅಟ್ಲಾಂಟಿಕ್ ಸಾಗರದ ತೀರದಲ್ಲೇ ತಲೆ ಎತ್ತಿ ನಿಂತಿರುವ ಈ ಪರ್ವತ ಆ ರಾಷ್ಟ್ರದ 'ಕೇಪ್ ಟೌನ್' ನಗರದ ಅತ್ಯಂತ ಪ್ರಧಾನ ಪ್ರವಾಸೀ ಆಕರ್ಷಣೆ ಕೂಡ. ಮರಳು ಶಿಲೆಯಿಂದ ಮೈದಳೆದಿರುವ ಈ ಏಕಶಿಲಾ ಪರ್ವತ ಮೂಲತಃ ರೂಪ ತಳೆದದ್ದು ಈಗ್ಗೆ ಸುಮಾರು 60 ಕೋಟಿ ವರ್ಷ ಹಿಂದೆ! ಭೂ ಅಂಚಿನ ಕಡಿಮೆ ಆಳದ ಕಡಲ ಪ್ರದೇಶದಲ್ಲಿ ಸಂಗ್ರಹಗೊಂಡಿದ್ದ ಮರಳಿನ ರಾಶಿ ನಿಧಾನವಾಗಿ ದೃಢವಾದ ಮರಳು ಶಿಲೆಯಾದ ನಂತರ



ಆ ವೇಳೆಗೆ ಅಲ್ಲಿ ಸಂಭವಿಸಿದ ಭೂ ನೆಲದ ವಿದ್ಯಮಾನಗಳಿಂದ ಮೇಲಕ್ಕೆ ತಳ್ಳಲ್ಪಟ್ಟು, ಮೇಲೇಳುತ್ತ ಏಳುತ್ತ ಈಗಿನ ಈ ಪರ್ವತ ಸ್ವರೂಪವನ್ನು ಪಡೆದಿದೆ. ಮರಳು ಶಿಲೆಯ ಮೇಲ್ಭಾಗವನ್ನು ಆವರಿಸಿದ್ದ ಮೃದು ಶಿಲೆಗಳೆಲ್ಲ ಶಿಥಿಲೀಕರಣಗೊಂಡು, ಕಳಚಿ ಬಿದ್ದು, ಮೂಲತಃ ಸಮತಟ್ಟಾಗಿಯೇ ಇದ್ದ ಗಟ್ಟಿಮರಳು ಶಿಲಾ ಪದರ ಮೇಜಿನ ಮೇಲ್ಭಾಗದಂತೆ ಉಳಿದಿದೆ. ಹಾಗೆ ಧರೆಯ ಅತ್ಯಂತ ಪ್ರಾಚೀನ ಪರ್ವತಗಳಲ್ಲೊಂದಾಗಿರುವುದೂ ಈ ನಿರ್ಮಿತಿಯ ಒಂದು ಅದ್ಭುತ.

ಮತ್ತೊಂದು ಅದ್ಭುತ ಏನೆಂದರೆ ಈ ವಿಸ್ಮಯಕರ ಬಂಡೆ ಮೇಜಿನ ಎಡಬಲದ ತುದಿಗಳಲ್ಲಿ ಒಂದೊಂದು ವಿಸ್ಮಯಕರ ಶಿಖರಗಳಿವೆ. ಅವುಗಳ ರೂಪಾನ್ವಯ ಹೆಸರುಗಳು 'ಸಿಂಹದ ತಲೆ ಮತ್ತು ದೆವ್ವದ ಶಿಖರ'. ಈ ಪರ್ವತದ ಇಳಿಜಾರುಗಳನ್ನು 2285 ವಿವಿಧ ಪ್ರಭೇದಗಳ ಸಸ್ಯಗಳು ಆವರಿಸಿ ಬೆಳೆದಿವೆ. ಆ ಪೈಕಿ ಶೇಕಡ 70ರಷ್ಟು ಪ್ರಭೇದಗಳು ಪೃಥ್ವಿಯ ಬೇರೆಲ್ಲೂ ಕಾಣಸಿಗುವುದಿಲ್ಲ! ಕೆಲ ಬಾರಿ ತೆಳ್ಳಗೆ, ಬೆಳ್ಳಗೆ ಮೋಡ ಪದರವನ್ನು 'ಟೇಬಲ್ ಕ್ಲಾತ್'ನಂತೆ ಹೊದ್ದು ನಿಲ್ಲುವ ಮೇಜು ಪರ್ವತದ ದೃಶ್ಯಗಳು ಅದೆಷ್ಟು ಅದ್ಭುತವೆಂದರೆ ಈ ಪರ್ವತವನ್ನು ವೀಕ್ಷಿಸಲು ಬರುವ ಪ್ರವಾಸಿಗಳ ಸಂಖ್ಯೆ ವಾರ್ಷಿಕ ಹತ್ತು ಲಕ್ಷವನ್ನೂ ಮೀರುತ್ತದೆ!

■ ಎನ್. ವಾಸುದೇವ್